429(121) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದೇವನಹಳ್ಳಿ ಬಳಿ ನಿರ್ಮಿಸಲಿರುವ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸರ್ಕಾರ ಯಾವಾಗ ಅಂತಿಮ ಅನುಮತಿ ನೀಡಿತು;

ಆ) ಇದಕ್ಕಾಗಿ ನೀಡಿರುವ ಒಟ್ಟು ಜಮೀನೆಷ್ಟು ;

ಇ) ಸುಮಾರು 400 ಎಕರೆ ಜಮೀನನ್ನು ಕಡಿತಗೊಳಿಸಿರುವುದು ನಿಜವೇ;

ಈ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು;

ಉ) ಕಾನೂನು ಒಪ್ಪಂದದ ದಾಖಲೆ ಹಾಗೂ ಇತರ ಕಾಗದ ಪತ್ರಗಳನ್ನು ತಯಾರಿಸಲು ಬ್ರಿಟನ್‌ನ ಕಾನೂನು ಸೇವಾ ಸಂಸ್ಥೆಗೆ 18 ಕೋಟಿ ರೂ ನೀಡಿರುವುದು ನಿಜವೇ;

ಊ) ರಾಜ್ಯದಲ್ಲಿಯೇ ಈ ಸೇವೆ ದೊರಕುತ್ತಿರಲಿಲ್ಲವೇ;

ಋ) ರಾಜ್ಯ ಸರ್ಕಾರ ಈ ಉದ್ದೇಶಿತ ವಿಮಾನ ನಿಲ್ದಾಣಕ್ಕಾಗಿ ಇಲ್ಲಿಯವರೆಗೆ ಖರ್ಚುಮಾಡಿದ ಹಣವೆಷ್ಟು;

ೠ) ಈ ವಿಮಾನ ನಿಲ್ದಾಣದ ಕಾರ್ಯ ಯಾವಾಗ ಪ್ರಾರಂಭವಾಗುತ್ತದೆ;

ಐ) ಈ ಕಾಮಗಾರಿ ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ(ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

ಅ) ದೇವನಹಳ್ಳಿ ಬಳಿ ನಿರ್ಮಿಸಲಿರುವ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸರ್ಕಾರವು ಎರಡು ಪ್ರಮುಖ ಯೋಜನೆಯ ಒಪ್ಪಂದಗಳಾದ ರಾಜ್ಯದ ಬೆಂಬಲ ಒಪ್ಪಂದ ಮತ್ತು ಭೂಮಿ ಗುತ್ತಿಗೆಯ ಒಪ್ಪಂದ ಇವುಗಳಿಗೆ ದಿನಾಂಕ 21–12–2004 ರಂದು ಅಂತಿಮ ಅನುಮತಿಯನ್ನು ನೀಡಿದೆ.

ಆ) ಇದಕ್ಕಾಗಿ ಸುಮಾರು 4100 ಎಕರೆಗಳಷ್ಟು ಜಮೀನು ಬೇಕಾಗುತ್ತದೆ.

ಇ) ಹೌದು

ಈ) ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ ಸಲಹೆಯಂತೆ ರನ್ ವೇ ಹೊಂದಿಕೆಯಲ್ಲಿ ಬದಲಾವಣೆ ಮಾಡಬೇಕಾಗಿರುವುದರಿಂದ ಸುಮಾರು 400 ಎಕರೆ ಜಮೀನು ಯೋಜನಾ ನಿವೇಶನದ ಉತ್ತರದ ಕಡೆಗೆ ಅಧಿಕವಾಗಿದ್ದು ಆದರೆ ದಕ್ಷಿಣದ ಕಡೆಗೆ ಹೆಚ್ಚುವರಿ ಬೇಕಾಗುವುದು.

ಉ) ನಿಜ. ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಸಂಸ್ಥೆ ಮತ್ತು ಖಾಸಗಿ ಪಾಲುದಾರರು ಕಾನೂನು ಒಪ್ಪಂದದ ದಾಖಲೆ ಹಾಗೂ ಇತರೆ ಕಾಗದ ಪತ್ರಗಳನ್ನು ತಯಾರಿಸಲು ವಿದೇಶಿ ಕಾನೂನು ಸಲಹೆಗಾರರಿಂದ ಸಲಹೆ ಪಡೆದು ಸದರಿ ವೆಚ್ಚವನ್ನು ಬಿಐಎಎಲ್ ಸಂಸ್ಥೆ ಭರಿಸಲಾಗಿದೆ.

ಊ) ವಿದೇಶಿ ಖಾಸಗಿ ಪಾಲುದಾರರು ತಮ್ಮದೇ ಆದ ಕಾನೂನು ಸಲಹೆಗಾರರ ಜೊತೆ ಸಲಹೆ ಪಡೆದಿರುವುದರಿಂದ ಇದು ಅನ್ವಯಿಸುವುದಿಲ್ಲ.

ಋ) ರಾಜ್ಯ ಸರ್ಕಾರವು ಈ ಯೋಜನೆಯ ಬಾಬ್ತು ದಿನಾಂಕ 13–01–2005 ರವರೆಗೆ ರೂ. 110.31 ಕೋಟಿಗಳನ್ನು ಗೆ ಬಿಡುಗಡೆ ಮಾಡಿದೆ ಇದರಲ್ಲಿ ಭೂಸ್ವಾಧೀನ ವೆಚ್ಚ ಕೂಡ ಸೇರಿದೆ.

ಋ) ಮಾರ್ಚ್ 2005ರಲ್ಲಿ ವಿಮಾನ ನಿಲ್ದಾಣದ ಕಾರ್ಯ ಪ್ರಾರಂಭವಾಗುವ ನಿರೀಕ್ಷೆ ಇದೆ.

ಐ) ಈ ಕಾಮಗಾರಿ ಕೆಲಸ ಪ್ರಾರಂಭವಾದ 33 ತಿಂಗಳುಗಳಲ್ಲಿ ಪೂರ್ಣಗೊಳಿಸಲಾಗುವುದು.

430(126) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಬೃಹತ್, ಮಧ್ಯಮ ಮತ್ತು ಸಣ್ಣ ಪ್ರಮಾಣ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಾರ್ವಜನಿಕ ಸ್ವಾಮ್ಯದ ಬೃಹತ್ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳ ಸಂಖ್ಯೆ ಎಷ್ಟು;

ಆ) ಇವುಗಳಲ್ಲಿ ಎಷ್ಟು ಕೈಗಾರಿಕೆಗಳು ರೋಗಗ್ರಸ್ತವಾಗಿವೆ;

ಇ) ಇವುಗಳನ್ನು ಮುಚ್ಚದೆ ಪುನಃಶ್ಚೇತನಗೊಳಿಸಲು ಸರ್ಕಾರ ನಿರ್ಧರಿಸಿದೆಯೇ;

ಈ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಯಾವ ಯಾವ ರೋಗಗ್ರಸ್ತ ಉದ್ದಿಮೆಗಳನ್ನು ಪುನಃಶ್ಚೇತನಗೊಳಿಸಲಾಗಿದೆ ಹಾಗೂ ಉಳಿದ ಎಲ್ಲಾ ರೋಗಗ್ರಸ್ತ ಉದ್ದಿಮೆಗಳನ್ನು ಯಾವಾಗ ಪುನಃಶ್ಚೇತನಗೊಳಿಸಲಾಗುವುದು;

ಉ) ಇದಕ್ಕಾಗಿ ಸರ್ಕಾರಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು;

ಊ) ರೋಗಗ್ರಸ್ತವಾಗಲು ಕಾರಣಗಳನ್ನು ಕಂಡುಹಿಡಿದು, ಪುನಃಶ್ಚೇತನಗೊಂಡ ಕೈಗಾರಿಕೆಗಳು ಮತ್ತೆ ರೋಗಗ್ರಸ್ತವಾಗುವುದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್, ಮಧ್ಯಮ ಮತ್ತು ಸಣ್ಣ ಪ್ರಮಾಣ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಸಚಿವರು)

ಅ) ರಾಜ್ಯದಲ್ಲಿ 27 ಸಾರ್ವಜನಿಕ ಸ್ವಾಮ್ಯದ ಬೃಹತ್ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳಿವೆ.

ಆ) ಇವುಗಳಲ್ಲಿ 21 ಉದ್ದಿಮೆಗಳು 2002–03ನೇ ಸಾಲಿನಲ್ಲಿ ನಷ್ಟ ಅನುಭವಿಸಿದೆ.

ಇ) ರೋಗಗ್ರಸ್ತವಾಗಿರುವಂತಹ ಉದ್ದಿಮೆಗಳನ್ನು ಪುನಃಶ್ಚೇತನಗೊಳಿಸಲು ಅರ್ಹವಾದ ಸಾರ್ವಜನಿಕ ಉದ್ದಿಮೆಗಳನ್ನು ಪ್ರತ್ಯೇಕ, ಪ್ರತ್ಯೇಕವಾಗಿ ಪರಿಗಣಿಸಿ ಪುನಶ್ಚೇತನಗೊಳಿಸಲು ತೀರ್ಮಾನಿಸಲಾಗುತ್ತಿದೆ.

ಈ) ಸಚಿವ ಸಂಪುಟದ ಉಪ ಸಮಿತಿಯು ಎನ್.ಜಿ.ಇ.ಎಫ್. ಮೈಶುಗರ್, ಎಂ.ಪಿ.ಎಂ. ಮತ್ತು ಕೆ.ಎಸ್.ಡಿ.ಎಲ್. ಘಟಕಗಳನ್ನು ಪುನಶ್ಚೇತನಗೊಳಿಸಲು ಶಿಫಾರಸ್ಸನ್ನು ಸಚಿವ ಸಂಪುಟಕ್ಕೆ ಮಾಡಲು ತೀರ್ಮಾನಿಸಿದೆ. ಉಳಿದ ರೋಗಗ್ರಸ್ತ ಉದ್ದಿಮೆಗಳನ್ನು ಅವುಗಳ ಅರ್ಹತೆಗನುಗುಣವಾಗಿ ಪ್ರತ್ಯೇಕ ಪ್ರತ್ಯೇಕವಾಗಿ ಪರಿಶೀಲಿಸಿ. ಕ್ರಮ ಕೈಗೊಳ್ಳಲಾಗುವುದು.

ಉ) ಇದಕ್ಕೆ ತಗಲುವ ವೆಚ್ಚವನ್ನು ಅಂದಾಜು ಮಾಡಲಾಗುತ್ತಿದೆ.

ಊ) ಸಚಿವ ಸಂಪುಟ ಉಪ ಸಮಿತಿಯು ಪುನಶ್ಚೇತನಗೊಳಿಸಲು ಶಿಫಾರಸ್ಸು ಮಾಡುವಾಗ ಮತ್ತೆ ರೋಗಗ್ರಸ್ತವಾಗುವುದನ್ನು ತಡೆಗಟ್ಟಲು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಹಾಗು ಸಚಿವ ಸಂಪುಟದ ಉಪ ಸಮಿತಿಯು, ಮುಂದೆ ಪುನಶ್ಚೇತನಕ್ಕೆ ಪ್ರತ್ಯೇಕ ಪ್ರತ್ಯೇಕವಾಗಿ ಪರಿಶೀಲಿಸಿದಾಗ ರೋಗಗ್ರಸ್ತವಾಗುವುದನ್ನು ತಡೆಗಟ್ಟಲು ಕ್ರಮ ತೆಗೆದುಕೊಳ್ಳಲಾಗುವುದು.